ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .

**ಸಿ.ಸಿ.ಸಂಖ್ಯೆ: 413/2022**

| | | |
|---|---|---|
| ಸಾಕ್ಷಿದಾರರ ಹೆಸರು | ಹೇಮಂತ್ ಕುಮಾರ್ | ಸಿ.ಡಬ್ಲ್ಯೂ: 1 |
| ಗಂಡನ / ತಂದೆ ಹೆಸರು | ಕೆ. ಶಿವಕುಮಾರ್ | ಪಿ.ಡಬ್ಲ್ಯೂ: 1 |
| ವಯಸ್ಸು | 42 ವರ್ಷ | |
| ಉದ್ಯೋಗ | ಪೊಲೀಸ್ ಇನ್ಸ್ ಪೆಕ್ಟರ್ | |
| ವಾಸಸ್ಥಳ | ರಾಮನಗರ. | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 29/08/2025

**ಮುಖ್ಯ ವಿಚಾರಣೆಃ ಸಸಅ ರಿಂದ**

ಜುಲೈ 2021 ರಿಂದ ಅಕ್ಟೋಬರ್ 2022 ರವರೆಗೆ ಆಲೂರು ಠಾಣೆಯಲ್ಲಿ ಕರ್ತವ್ಯ ಮಾಡಿರುತ್ತೇನೆ. ದಿ.23.05.22 ರಂದು ಸಂಜೆ 5 ಕ್ಕೆ ನಾನು ಮತ್ತು ಚಾಸಾ 2 ಮತ್ತು 3 ರವರು ಗಸ್ತಿನಲ್ಲಿದ್ದಾಗ ನಂದೀಶ್ ರವರ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿಯ ಆಧಾರದ ಮೇಲೆ ಕಾರ್ಜುವಳ್ಳಿ ಗ್ರಾಮಕ್ಕೆ ತೆರಳಿ

ನೋಡಿದಾಗ ಅಂಗಡಿಯ ಮುಂಭಾಗದಲ್ಲಿ ಒಬ್ಬ ವ್ಯಕ್ತಿಯು ಬಿಳಿ ಚೀಲ ಹಿಡಿದುಕೊಂಡು ನಿಂತಿದ್ದು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದಾಗ ಆತನನ್ನು ಹಿಡಿದು ವಿಚಾರಿಸಿದಾಗ ಆತನ ಹೆಸರು ನಂದೀಶ್ ಉಃ ಬೆನಕರಾಜ ಎಂದು ತಿಳಿಸಿದ್ದು ನಂತರ ಅಲ್ಲಿಂದ ಠಾಣೆಗೆ ಚಾಸಾ 3 ರವರ ಮುಖಾಂತರ ದೂರು ಕಳಿಸಿಕೊಟ್ಟಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 1ಎ ಎಂದು ಗುರುತಿಸಲಾಯಿತು. ನಂತರ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಚೀಲವನ್ನು ತೆರೆದು ನೋಡಲಾಗಿ 90 ಎಂ.ಎಲ್. ನ ಒರಿಜಿನಲ್ ಚಾಯ್ಸ್ 32 ಟೆಟ್ರಾ ಪ್ಯಾಕ್ ಗಳು ದೊರಕಿದ್ದು ಅವುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಮೊಹರು ಮಾಡಿ ಸಂಜೆ 6.30 ರಿಂದ 7 ರವರೆಗೆ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು 2ಎ ಎಂದು ಗುರುತಿಸಲಾಯಿತು. ಮಾದರಿ ಸೀಲಿನ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಸಾಕ್ಷಿಯ ಸಹಿಯನ್ನು 3ಎ ಎಂದು ಗುರುತಿಸಲಾಯಿತು. ಆರೋಪಿ ಮತ್ತು ಮಾಲಿನೊಂದಿಗೆ ಠಾಣೆಗೆ ಹಿಂದಿರುಗಿರುತ್ತೇವೆ. ಚಾಸಾ 2 ರಿಂದ 5 ರವರ ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿ.06.06.22 ರಂದು ಚಾಸಾ 7 ರವರ

ಹೇಳಿಕೆಯನ್ನು ದಾಖಲಿಸಿರುತ್ತೇನೆ. ದಿ.07.06.22 ರಂದು ಚಾಸಾ 7 ರವರ ಮುಖಾಂತರ ಮು.ಮಾ.ನ್ನು ಎಫ್.ಎಸ್.ಎಲ್. ಗೆ ಕಳಿಸಿರುತ್ತೇನೆ. ದಿ.25.07.22 ರಂದು ಎಫ್.ಎಸ್.ಎಲ್ ವರದಿ ಪಡೆದು ತನಿಖೆ ಪೂರ್ತೈಸಿ ಅಂತಿಮ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ಎಫ್.ಎಸ್.ಎಲ್ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಸಾಕ್ಷಿಯ ಸಹಿಯನ್ನು 4ಎ ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ ಮತ್ತು 32 ಟೆಟ್ರಾ ಪ್ಯಾಕ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಕೆ.ಎಂ.ಕೆ. ವಕೀಲರಿಂದಃ**

ಘಟನೆಯ ದಿನ ಸಂಜೆ 4.45 ಕ್ಕೆ ಆಲೂರಿನಿಂದ ಹೊರಟಿರುತ್ತೇವೆ. ಮಾಹಿತಿ ಬಂದಾಗ ನಾವು ಎಲ್ಲಿ ಗಸ್ತು ಮಾಡುತ್ತಿದ್ದೆವು ಎಂದರೆ ಕಾರ್ಜುವಳ್ಳಿ ಕಡೆ ಹೋಗುತ್ತಿದ್ದೆವು. ಆಲೂರಿನಿಂದ ಯಾವ ಮಾರ್ಗವಾಗಿ ಕಾರ್ಜುವಳ್ಳಿಗೆ ಹೋಗಿರುತ್ತೀರ ಎಂದರೆ ಕಣತ್ತೂರು ಕಡೆಯಿಂದ. ಸಂಜೆ 5–5.15 ರ ಒಳಗೆ ಮಾಹಿತಿ ಬಂದಿರುತ್ತದೆ. ಠಾಣಾ ದಿನಚರಿಯಲ್ಲಿ ನಮ್ಮ ಗಸ್ತಿನ ಬಗ್ಗೆ ನಮೂದಿಸಿರುತ್ತೇವೆ.

ಘಟನೆ ನಡೆದಿದೆ ಎನ್ನಲಾದ ಸ್ಥಳದಿಂದ 25 ಮೀ ಅಂತರದಲ್ಲಿ

ಜೀಪ್ ನಿಲ್ಲಿಸಿರುತ್ತೇವೆ. ಮು.ಮಾ. 1 ಅಂಗಡಿಯ ಒಳಗೆ ಅಥವಾ ಹೊರಗೆ ಇತ್ತ ಎಂದರೆ ಹೊರಭಾಗದಲ್ಲಿ. ಅಂಗಡಿಯಲ್ಲಿ ಯಾರು ವ್ಯಾಪಾರ ಮಾಡುತ್ತಿದ್ದರು ಎಂದರೆ ಆರೋಪಿ. ನಿಪಿ 1 ರಲ್ಲಿ ಚೀಲದ ಬಣ್ಣ ತಿಳಿಸಿದ್ದೀರ ಎಂದರೆ ತಿಳಿಸಿರುತ್ತೇನೆ. ಆರೋಪಿಯನ್ನು ನಾವು 3 ಜನ ಹಿಡಿದಿರುತ್ತೇವೆ. ಘಟನಾ ಸ್ಥಳದ ಚೆಕ್ಕುಬಂದಿ ಏನು ಎಂದರೆ ಈಗ ನೆನಪಿಲ್ಲ. ಸದರಿ ಅಂಗಡಿ ಯಾರಿಗೆ ಸೇರಿರುತ್ತದೆ ಎಂದು ವಿಚಾರಿಸಿದ್ದೀರ ಎಂದರೆ ವಿಚಾರಿಸಿರುತ್ತೇವೆ. ಸಂಜೆ 5 ಗಂಟೆಗೆ ಸಾಮಾನ್ಯವಾಗಿ ಸಾಮಾನ್ಯವಾಗಿ ಓಡಾಡುತ್ತಾರೆ ಎಂದರೆ ಸರಿ. ಕಾರ್ಜುವಳ್ಳಿ ಗ್ರಾಮದಲ್ಲಿ 100 ಮನೆಗಳಿವೆ ಎಂದರೆ ಸರಿ. ಗ್ರಾಮದವರನ್ನು ವಿಚಾರಿಸಿದ್ದೀರ ಎಂದರೆ ವಿಚಾರಿಸಿರುತ್ತೇವೆ. ಚಾಸಾ 4 ಮತ್ತು 5 ರವರು ಎಲ್ಲಿದ್ದರು ಎಂದರೆ ದಾರಿಯಲ್ಲಿ ಹೋಗುತ್ತಿದ್ದವರನ್ನು ಕರೆದಿರುತ್ತೇವೆ.

ಆರೋಪಿ ಮು.ಮಾ.1ನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಆರೋಪ ಸಾಬೀತಾಗದೇ ಇದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .